ದಿನಾಂಕಃ 19.02.2026 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಪ್ರತಿ ವಾದಿಯ ಪರ ವಕೀಲರಿಂದಃ**

ನ್ಯಾಯಾಲಯಕ್ಕೆ ನಾನು ನನ್ನ ಪರವಾಗಿ ದಾಖಲೆಯನ್ನು ಹಾಜರಪಡಿಸಿದ್ದು , ಅದನ್ನು ನಿಶಾನೆಯಾಗಿ ನನ್ನ ಪರವಾಗಿ ಗುರುತಿಸಬೇಕೆಂದು ಕೇಳಿಕೊಳ್ಳುತ್ತೇನೆ. ಸಾಕ್ಷಿ ಹಾಜರುಪಡಿಸಿದ ದಾಖಲೆಯನ್ನು ಈ ಕೆಳಗಿನಂತೆ ನಿಶಾನೆಯಾಗಿ ಗುರುತಿಸಲಾಗಿದೆ.

| ನಿಶಾನೆ ಡಿ | ದಾಖಲೆಗಳು |
|---|---|
| 6 | ದಿನಾಂಕ 15.01.1997 ರ ಕ್ರಯ ಪತ್ರದ ದೃಢೀಕೃತ ಪ್ರತಿ |
| 7 | ದಿನಾಂಕ 26.11.1998 ರ ಕ್ರಯ ಪತ್ರದ ದೃಢೀಕೃತ ಪ್ರತಿ |
| 8 | ದಿನಾಂಕ 28.04.2001 ರ ಕ್ರಯ ಪತ್ರದ ದೃಢೀಕೃತ ಪ್ರತಿ |
| 9 | ದಿನಾಂಕ 29.05.2003 ರ ಕ್ರಯ ಪತ್ರದ ದೃಢೀಕೃತ ಪ್ರತಿ |
| 10 | MR 12/1996-97 ರ ದೃಢೀಕೃತ ಪ್ರತಿ |
| 11 | MR 12/1998-99 ರ ದೃಢೀಕೃತ ಪ್ರತಿ |
| 12 | ಸರ್ವೆ ನಂ. 11ರ ಕೈ ಬರಹದ ಪಹಣಿಯ ದೃಢೀಕೃತ ಪ್ರತಿ |
| 13 | ಇಸಿ |
| 14 | ದಿನಾಂಕ 29.08.2005ರ ದಾನದ ಪತ್ರದ ದೃಢೀಕೃತ ಪ್ರತಿ |
| 15 | ಸರ್ವೆ ನಂ. 11/2 ರ RTC Extract |
| 16 | ವಾಸ ಸ್ಥಳದ ದೃಢೀಕರಣ ಪ್ರತಿ |
| 17 | ವಿದ್ಯುತ್ ಬಿಲ್ |
| 18 | ಬೋನಪೆಲ್ಡ್ ದೃಢೀಕೃತ ಪ್ರತಿ |
| 19 | ಕಂದಾಯ ರಶೀದಿ |
| 20 | ಪಟ್ಟಾ ಪುಸ್ತಕ |

**ಪಾಟೀ ಸವಾಲುಃ ಶ್ರೀ RMCG ವಕೀಲರಿಂದಃ**

ನಿಮ್ಮ ಮುಂದುವರೆದ ಪ್ರಮಾಣ ಪತ್ರದಲ್ಲಿ ಸಲ್ಲಿಸಿರುವ ವಿಚಾರ ನಿಮಗೆ ಗೊತ್ತಾ ಎಂದರೆ ಸಾಕ್ಷಿದಾರರು ಪೂರ್ತಿ ಓದಿಲ್ಲ , ಸ್ವಲ್ಪ ತಿಳಿದುಕೊಂಡಿರುವುದಾಗಿ ನುಡಿಯುತ್ತಾರೆ. ಅದರಲ್ಲಿ ಯಾವ ವಿಚಾರ ಬರೆದಿದೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿದಾರರು ದಾವಾ ಸ್ವತ್ತು ನಮ್ಮದೇ ಎಂದು ಬರೆದಿರುವುದಾಗಿ ನುಡಿಯುತ್ತಾರೆ. ನಿಮ್ಮ ಮುಂದುವರೆದ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರ ನಿಮಗೆ ತಿಳಿದಿಲ್ಲ , ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ನಿಡಿ-6 ರಿಂದ 9 ರ ದಾಖಲೆಗಳನ್ನು ಕೊಟ್ಟಿರುತ್ತೀರಿ , ಅದು ಯಾರಿಗೆ ಸಂಬಂಧಪಟ್ಟದ್ದು ಎಂದರೆ ಸಾಕ್ಷಿದಾರರು ಸದರಿ ದಾಖಲೆಗಳು ನಮ್ಮ ಸ್ವತ್ತಿಗೆ ಸಂಬಂಧಪಟ್ಟಿದ್ದು , ಈ ಹಿಂದೆ ಖರೀದಿ ಮಾಡಿದ ಬಗ್ಗೆ ಇದೆ ಎಂದು ನುಡಿಯುತ್ತಾರೆ. ಯಾರು ಈ ಹಿಂದೆ ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನಿಡಿ-10 ಮತ್ತು 11 ಯಾರ ಹೆಸರಿನಲ್ಲಿದೆ ಎಂದರೆ ಸಾಕ್ಷಿದಾರರು ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಡಿ-12 ಯಾರ ಹೆಸರಿನಲ್ಲಿದೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿದಾರರು ಮುಂದುವರೆದು ಚಿಕ್ಕ ವೀರಯ್ಯ ರವರ ಹೆಸರಿನಲ್ಲಿ ಸರ್ವೆ ನಂ. 11 ಇತ್ತು ಎಂದು ನುಡಿಯುತ್ತಾರೆ.

ನಿಡಿ-14 ಅನ್ನು ಯಾರು ಯಾರಿಗೆ ಬರೆದಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ಅಜ್ಜಿ ಮೊಮ್ಮಗನಿಗೆ ಬರೇದುಕೊಟ್ಟಿರುತ್ತಾರೆ , ಹೆಸರು ನೆನಪಿಲ್ಲ , ಯಾವ ವರ್ಷ ಆಗಿದೆ ಎಂದು ನೆನಪಿಲ್ಲ ಎಂದು ನುಡಿಯುತ್ತಾರೆ. ನಿಂಗಮ್ಮ ಉ. ಪುಟ್ಟತಾಯಮ್ಮ ಅನಿಲ್ ರವರಿಗೆ ಯಾವುದೇ ರೀತಿಯ ದಾನಪತ್ರವನ್ನು ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ದಾನ ಮಾಡಿರುವ ಬಗ್ಗೆ ನಿಮಗೆ ಹೇಗೆ ಗೊತ್ತಾಯಿತು ಎಂದರೆ ಸಾಕ್ಷಿದಾರರು ದಾಖಲೆಗಳಿಂದ ಎಂದು ನುಡಿಯುತ್ತಾರೆ.

ಅನಿಲ್ ಕುಮಾರ್ ರವರು ನಿಂಗಮ್ಮ ರವರ ಹೆಸರಿನಲ್ಲಿ ದಾನಪತ್ರವನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅನಿಲ್ ಕುಮಾರ್ ರವರು ದಾನಪತ್ರವನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ ಎನ್ನುವ ವಿಚಾರ ನಿಂಗಮ್ಮ ರವರಿಗೆ ಗೊತ್ತಾಗಿ ಅವರು ದೂರನ್ನು ನೀಡಿ, ಉಪ ನೋಂದಾವಣಿ ಕಛೇರಿಯಲ್ಲಿ ದಾನಪತ್ರವನ್ನು ರದ್ದು ಮಾಡಿರುತ್ತಾರೆ ಎಂದರೆ

ಗೊತ್ತಿಲ್ಲ. ಅಕ್ರಮವಾಗಿ ದಾನಪತ್ರವಾಗಿದ್ದು ಅದನ್ನು ರದ್ದು ಮಾಡಿರುತ್ತಾರೆ , ಅದು ಈಗಾಗಲೇ ನಿಪಿ-14 ಎಂದು ಗುರುತಿಸಲ್ಪಟ್ಟಿರುತ್ತದೆ ಎಂದರೆ ಗೊತ್ತಿಲ್ಲ. ದಾನ ಪತ್ರ ರದ್ದಾದ ಮೇಲೆ ಅನಿಲ್ ಕುಮಾರ್ ರವರಿಗೆ ದಾವಾ ಸ್ವತ್ತಿನ ಮೇಲೆ ಯಾವುದೇ ಮಾಲೀಕತ್ವ , ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ದಾನ ಪತ್ರ ರದ್ದಾದ ಬಳಿಕ ನಿಂಗಮ್ಮ ನವರೇ ದಾವಾ ಸ್ವತ್ತಿನ ಸ್ವಾ ಧೀನ ಹಾಗೂ ಮಾಲೀಕತ್ವ ಹೊಂದಿದ್ದರು ಎಂದರೆ ಗೊತ್ತಿಲ್ಲ.

ದಾನ ಪತ್ರ ರದ್ದಾದ ವಿಷಯ ಗೊತ್ತಾಗಿ ಅನಿಲ್ ಕುಮಾರ್ ರವರು ಸದರಿ ಸ್ವತ್ತನ್ನು ಮುನಾವರ್ ಬೇಗ್ ರವರಿಗೆ ಮಾರಾಟ ಮಾಡಿದ್ದರು ಎಂದರೆ ಗೊತ್ತಿಲ್ಲ. ಅನಿಲ್ ಕುಮಾರ್ ರವರು ಮತ್ತು ಮುನಾವರ್ ಬೇಗ್ ಇಬ್ಬರೂ ಸ್ನೇಹಿತರು , ಒಂದು ಸುಳ್ಳು ಕ್ರಯ ಪತ್ರವನ್ನು ಸೃಷ್ಟಿ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಅನಿಲ್ ಕುಮಾರ್ ರವರು ಮುನಾವರ್ ಬೇಗ್ ರವರಿಗೆ ಯಾವುದೇ ಅಧಿಕರ ದಾವಾ ಸ್ವತ್ತಿನ ಮೇಲೆ ಇಲ್ಲದಿದ್ದರೂ ಸುಳ್ಳು ಕ್ರಯ ಪತ್ರ ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮುನಾವರ್ ಬೇಗ್ ರವರಿಗೆ ಕ್ರಯ ಪತ್ರ ಆಗಿದ್ದರೂ ಸಹ ಅವರು ದಾವಾ ಸ್ವತ್ತಿನಲ್ಲಿ ಮಾಲೀಕತ್ವ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಲಪಟಾಯಿಸುವ ಉದ್ದೇಶದಿಂದ ಮುನಾವರ್ ಬೇಗ್ ಮತುತ ನೀವು ಒಂದು ಸುಳ್ಳು ಕ್ರಯ ಪತ್ರ ಸೃಷ್ಟಿ ಮಾಡಿರುತ್ತೀರಿ ಎಂದರೆ ಸರಿಯಲ್ಲ.

ನಿಡಿ-16 ರ ಪ್ರಕಾರ ಎಷ್ಟು ವರ್ಷಗಳಿಂದ ವಾಸವಾಗಿದ್ದೀರಿ ಎಂದರೆ ಸಾಕ್ಷಿದಾರರು 16 ವರ್ಷಗಳಿಂದ ಎಂದು ನುಡಿಯುತ್ತಾರೆ. ವಾಸದ ದೃಢೀಕರಣ ಪತ್ರದಲ್ಲಿ ನಿಮ್ಮ ಮನೆ ನಂಬರ್ ಇರುವುದಿಲ್ಲ ಎಂದರೆ ಸರಿಯಲ್ಲ, ವಾಸ ದೃಢೀಕರಣ ಪತ್ರದಲ್ಲಿ 6 ತಿಂಗಳಿಂದ ಮಾತ್ರ ವಾಸವಾಗಿರುವುದಾಗಿ ದೃಢೀಕರಿಸಿರುತ್ತಾರೆ ಎಂದರೆ ಸಾಕ್ಷಿದಾರರು 2017 ರಿಂದಲೇ ವಾಸವಿರುವುದಾಗಿ ನುಡಿಯುತ್ತಾರೆ. ಸದರಿ ನಿಡಿ-16 ಚಾಲ್ತಿಯಲ್ಲಿಲ್ಲ ಎಂದರೆ ಸರಿ . ಮುಂದಿನ ದಿನಾಂಕದಲ್ಲಿ ಚಾಲ್ತಿಯಲ್ಲಿರುವುದನ್ನು ಹಾಜರುಪಡಿಸುವುದಾಗಿ ನುಡಿಯುತ್ತಾರೆ. ನಿಡಿ-17 ನಿಮ್ಮ ಮನೆಗೆ ಸಂಬಂಧ ಪಟ್ಟಿದು ಎಂದರೆ ಸರಿಯಲ್ಲ. ನಿಡಿ-18 ಸಹ ಚಾಲ್ತಿಯಲಿಲ್ಲ ಎಂದರೆ ಸರಿಯಲ್ಲ. ನಿಡಿ-19 ಮತ್ತು 20 ಸಹ ಈ ದಾವಾ ಸ್ವತ್ತಿಗೆ ಸಂಬಂಧಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನೀವು ಸಲ್ಲಿಸಿರುವ ಎಲ್ಲಾ ದಾಖಲೆಗಳು ದಾವಾ ಸ್ವತ್ತನ್ನು ಲಪಟಾಯಿಸುವ ಉದ್ದೇಶದಿಂದ ಸೃಷ್ಟಿ ಮಾಡಿಕೊಂಡು ಸಲ್ಲಿಸಿರುವ ದಾಖಲೆಗಳು ಎಂದರೆ ಸರಿಯಲ್ಲ.

ಮುನಾವರ್ ಬೇಗ್ ದಾವಾ ಸ್ವತ್ತನ್ನು ಮಾರಾಟ ಮಾಡುವ ಯಾವ ಹಕ್ಕು ಇರಲಿಲ್ಲ , ಇಬ್ಬರೂ ಸೇರಿ ದಾವಾ ಸ್ವತ್ತನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ವಾದಿಗಳು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ , ಕನಕಪುರ